ಅನೇಕ ಎಡರು ತೊಡರುಗಳಿರುತ್ತವೆ. ಅದರಿಂದ, ಸಹಕಾರ ಸಂಘಗಳ ಮೂಲಕವೇ ಆ ಮನೆಗಳನ್ನು ಕಟ್ಟಬೇಕೆಂದು ಹೇಳಿ, ಬಿತ್ತನೆ ವಲಯದಲ್ಲಿಯೇ 32 ಸಹಕಾರ ಸಂಘಗಳನ್ನು ತೆರೆಯಬೇಕೆಂಬ ತೀರ್ಮಾನ ತೆಗೆದುಕೊಂಡಿದ್ದೇವೆ. ಆದ್ದರಿಂದ, ಈ ಬೇಡಿಕೆಗಳಿಗೆ ಅನುಮೋದನೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

ಮೀನುಗಾರಿಕೆ ಮತ್ತು ಬಂದರು ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ

+ ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಇಲಾಖೆ ಒಂದು ಭೌತಿಕವಾಗಿ, ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗದವರ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಹೇಳಿದರು ಈ ಇಲಾಖೆಯಲ್ಲಿ ಯಾವ ಒಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ ಎಂದು. ಪ್ರಾಯಶಃ ನನ್ನ ಅನುಭವದಲ್ಲಿ ಹಿಂದೆ ಏನೂ ಕಾರ್ಯಕ್ರಮವನ್ನು ಆಗಿರಲಿಲ್ಲ ಈಗ ನಾವು ಒಂದು ಕಾರ್ಯಕ್ರಮವನ್ನು ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಹಿಂದೆ ಅವರು ಮಾಡಿದ್ದರೆ ನಾವು ಇನ್ನೂ ಹೆಚ್ಚು ಕೆಲಸ ಮಾಡುವುದಕ್ಕೆ ಒಂದು ಅಭಿಪ್ರಾಯ ಬರುತ್ತದೆ. 1994ನೇ ಇಸವಿಯಲ್ಲಿ ನಮ್ಮ ಸರ್ಕಾರ ಬಂದಾಗ 8 ಕೋಟಿ ಮೀನಿನ ಮರಿಗಳನ್ನು ಉತ್ಪಾದನೆ ಮಾಡುತ್ತಿದ್ದರು. ಇವತ್ತು ನಾವು 20 ಕೋಟಿ ಮೀನಿನ ಮರಿಗಳನ್ನು ಉತ್ಪಾದನೆ ಮಾಡುತ್ತಿದ್ದೇವೆ. ಒಳನಾಡು ಮೀನುಗಾರಿಕೆಯಲ್ಲಿ 70 ಸಾವಿರ ಟನ್ ಮೀನು ಉತ್ಪಾದನೆ ಮಾಡುತ್ತಿರುವುದನ್ನು ಈಗ ನಾವು ಒಂದು ಲಕ್ಷ ಹತ್ತು ಟನ್‌ಗೆ ಹೆಚ್ಚು ಮಾಡಿದ್ದೇವೆ. ಅದೇ ರೀತಿಯಲ್ಲಿ ಅನೇಕ ಮೀನು ಮರಿ ಉತ್ಪಾದನಾ ಕೇಂದ್ರಗಳು ನಮ್ಮ ಮೀನುಗಾರರ ಬೇಡಿಕೆಗಳನ್ನು ತುಂಬಲಿಕ್ಕೆ ಆಗುತ್ತಿಲ್ಲ ಆದ್ದರಿಂದ ಸರ್ಕಾರಿವಲಯದಲ್ಲಿ ಇದ್ದಂತಹ ಮೀನು ಮರಿ ಉತ್ಪಾದನಾ ಕೇಂದ್ರಗಳು ಏನು ಡೀಫಂಕ್ಟ್ ಆಗಿವೆ, ಅವುಗಳನ್ನೆಲ್ಲಾ ಪ್ರವೇಟೈಜ್ ಮಾಡಿ ಈ ಫಿಷರೀಸ್ ಗ್ರ್ಯಾಜುಯೇಟ್ಸ್‌ಗೆ ಪ್ರಥಮ ಆದ್ಯತೆಯನ್ನು ಕೊಟ್ಟು ಮಾಡಬೇಕೆನ್ನುವ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಹಾಗೆಯೇ ಬೇಸಾಯಕ್ಕೆ ಯೋಗ್ಯವಲ್ಲದ ಜವಗು ಮತ್ತು ಚೋಳು ಪ್ರದೇಶದಲ್ಲಿ ನಾವು ಸುಮಾರು 30 ಸಾವಿರ ಸಬ್ಸಿಡಿಯನ್ನು ಕೊಟ್ಟು, ಮೀನು ಮರಿ ಉತ್ಪಾದನೆಗೆ ಉತ್ತೇಜನವನ್ನು ಕೊಡುತ್ತಿದ್ದೇವೆ. ಒಳನಾಡು ಮೀನು ಮಹಾಮಂಡಲಿ ಎಂದು ಮೈಸೂರಿನಲ್ಲಿ ಒಂದು ಇದೆ. ಪ್ರಾಯಶಃ ಹಿಂದಿನ ಮೀನುಗಾರಿಕಾ ಸಚಿವರು ಅದರ ಅಧ್ಯಕ್ಷರಾಗಿದ್ದರು, ಈಗ ನಾನು ಅದರ ಅಧ್ಯಕ್ಷನಾಗಿದ್ದೇನೆ. ಪ್ರಾಯಶಃ ಅದರ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಟ್ಟರೆ ಅನುಕೂಲವಾಗಬಹುದು, ಹಿಂದೆ ಅದು ಯಾವ ರೀತಿ ಇತ್ತು ಈಗ ಯಾವ ರೀತಿ ಇದೆ, 1994ನೇ ಇಸವಿಯಲ್ಲಿ 24.98 ರಷ್ಟು ಮೀನು ಮರಿ ಭಿತ್ತನೆಯನ್ನು ಮಾಡಿದ್ದರೆ ನಾವು 174 ಲಕ್ಷದಷ್ಟು ಮೀನು ಮರಿ ಬಿತ್ತನೆಯನ್ನು ಮಾಡಿದ್ದೇವೆ. ಹಾಗೆ ಈ ಒಂದು ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಹಾಸನ ಜಿಲ್ಲೆಗಳಲ್ಲಿ ಎನ್‌ಸಿ ಡಿಸಿ ನೆರವನ್ನು ಪಡೆದು ನಾವು ಮೀನುಗಾರಿಕಾ ಅಭಿವೃದ್ಧಿಯನ್ನು ಮಾಡಿದ್ದೇವೆ. ಮೈಸೂರು ಮಹಾ ಮಂಡಲಿಯವರು ಈ ಮೀನಿನ ಮರಿಯ ಉತ್ಪಾದನೆಯನ್ನು ಎಷ್ಟು ಮಾಡಿದ್ದಾರೆ ಎನ್ನುವ

ಬಗ್ಗೆ ನಾನು ಕೆಲವು ಮಾಹಿತಿಗಳನ್ನು ಕೊಡಬೇಕಾಗುತ್ತದೆ. 1994-95ರಲ್ಲಿ ಒಂದು ಟನ್ ಮಿನಿನ ವ್ಯಾಪಾರವನ್ನು ಮಾಡಿದ್ದರು. ನಾವು 1997-98ಕ್ಕೆ 593 ಟನ್‌ಗೆ ಮುಟ್ಟಿದ್ದೇವೆ. ಈಗ ಮೀನುಗಾರರು ಮಹಾ ಮಂಡಲಿ ಮುಖೇನ ಒಳನಾಡು ಮೀನುಗಾರಿಕೆಯನ್ನು

ಶ್ರೀ ಸಿ.ಆರ್. ಸಗೀರ್ ಅಹಮದ್ : ಇವರ ಅಧಿಕಾರದ ಅವಧಿಯಲ್ಲಿ ಯಾವ ಯಾವ ಮೀನುಗಳನ್ನು ಉಳಿಸಿದ್ದಾರೆ ಎನ್ನುವ ಮಾಹಿತಿ ಏನಾದರೂ ಇದ್ದರೆ ಕೊಟ್ಟರೆ ಒಳ್ಳೆಯದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೇ, ಮೀನನ್ನು ಉಳಿಸುವುದಕ್ಕೋಸ್ಕರ ನಾವು ಮೀನು ಉತ್ಪಾದನೆಯನ್ನು ಮಾಡುವುದಿಲ್ಲ, ಮೀನನ್ನು ತಿನ್ನುವುದಕ್ಕೋಸ್ಕರ ನಾವು ಮೀನು ಉತ್ಪಾದನೆಯನ್ನು ಮಾಡುತ್ತೇವೆ. ಆರ್ನಮೆಂಟಲ್ ಮೀನನ್ನು ಮಾತ್ರ ನಾವು ಉಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತೆ ಉಳಿದಿದ್ದನ್ನು ಎಲ್ಲಾ ತಿನ್ನುವುದಕ್ಕೆ ಉತ್ಪತ್ತಿ ಮಾಡುವುದು. ಮೈಸೂರು ಮಹಾ ಮಂಡಳಿ ಮುಖೇನ ಒಳನಾಡು ಮೀನುಗಾರಿಕೆಯ ಅಭಿವೃದ್ಧಿಗೋಸ್ಕರ ಎನ್‌ಸಿ ಡಿಸಿ ಯಿಂದ 15.60 ಕೋಟಿ ರೂಪಾಯಿಗಳ ಒಂದು ನೆರವನ್ನು ಪಡೆದು ಸಮಗ್ರ ಒಳನಾಡು ಅಭಿವೃದ್ಧಿಗೋಸ್ಕರ ಒಂದು ಪ್ರಾಜೆಕ್ಟ್ ರಿಪೋರ್ಟನ್ನು ಸಬ್‌ಮಿಟ್ ಮಾಡಿದ್ದೇವೆ. ಅದು ಸದ್ಯದಲ್ಲಿಯೇ ಮಂಜೂರು ಆಗುವ ಹಂತದಲ್ಲಿದೆ. ಅದೇ ರೀತಿಯಲ್ಲಿ ನಾವು ಕರಾವಳಿ ಮೀನುಗಾರಿಕೆ ಅಭಿವೃದ್ಧಿಗೋಸ್ಕರ 23.24 ಕೋಟಿ ರೂಪಾಯಿಗಳನ್ನು ಎನ್‌ಸಿ ಡಿಸಿ ಯಿಂದ ಪಡೆದು ಈಗಾಗಲೇ ಸಮಗ್ರ ಕರಾವಳಿ ಮೀನುಗಾರಿಕೆಯ ಅಭಿವೃದ್ಧಿಯನ್ನು ಮಾಡಲು ಸರ್ಕಾರದಿಂದ ಹಣವನ್ನು ಕೊಟ್ಟು ಮಂಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಯ ಮಹಾಮಂಡಲಿಗಳು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಈ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಮೀನುಗಾರರ ಮಹಾ ಮಂಡಲಿ ಸಾಧಾರಣ ಒಟ್ಟಿಗೆ 175 ರಿಂದ 200ಲಕ್ಷ ರೂಪಾಯಿಗಳವರೆಗೆ ನಷ್ಟವನ್ನು ಹೊಂದಿತ್ತು . ಆ ಸಾಲವನ್ನು ತೀರಿಸುವುದಕ್ಕೋಸ್ಕರ ನಮ್ಮ ಸಹಕಾರಿ ಸಚಿವರ ಕೊಠಡಿಯಲ್ಲಿ ಒಂದು ಸಭೆಯನ್ನು ಮಾಡಿ ನಾವು ಡಿ ಸಿ ಸಿ ಬ್ಯಾಂಕಿನಿಂದ ಪಡೆದು ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿ ಸುಮಾರು 71 ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಕೊಟ್ಟು ಆ ಸಾಲವನ್ನು ತೀರಿಸಿ ಕರಾವಳಿ ಮೀನುಗಾರ ಅಭಿವೃದ್ಧಿ ಮಹಾಮಂಡಲಿಗೆ ಕೊಟ್ಟಿದ್ದೇವೆ. ಮತ್ತೆ ಶ್ರೀ ಜಯರಾಮಶೆಟ್ಟರು ಮಾತನಾಡುತ್ತಾ ಜಟ್ಟಿಗಳ ನಿರ್ಮಾಣದ ಬಗ್ಗೆ ಕೇಳಿದರು ಮತ್ತು ಮಾನ್ಯ ವಸಂತ ಸಾಲಿಯಾನ ಅವರು ಉಡುಪಿಯಲ್ಲಿ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿರುವುದು ನಾನು ನೋಡಿದ್ದೇನೆ. ಬೆಜಮಾಡಿಯಲ್ಲಿ ನನ್ನ ಕಾಲದಲ್ಲಿ ಒಂದು ಕೋಟಿ ರೂಪಾಯಿಗಳು ಇಟ್ಟಿದ್ದೆ ಎಂದು ಅದು ತಪ್ಪು. ಪ್ರತಿ ವರ್ಷ 1992ನೇ ಇಸವಿಯಿಂದ ಎರಡು ಕೋಟಿ ರೂಪಾಯಿಗಳನ್ನು ಲ್ಯಾಂಡ್ ಅಭಿವೃದ್ಧಿಗೋಸ್ಕರ ಇಟ್ಟುಕೊಂಡು ಬಂದಿದ್ದರು ಅವರ ಕಾಲದಲ್ಲಿ ಅದು ಖರ್ಚಾಗಿಲ್ಲ. ನಮ್ಮ ಕಾಲದಲ್ಲಿ ನಾವು ಹತ್ತು ಲ್ಯಾಂಡಿಂಗ್ ಸೆಂಟರ್ಸ್‌ಗೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆ ಈಗ ಮಲ್ಪೆ ಎರಡನೇ ಹಂತದ ಕಾರ್ಯಕ್ರಮವನ್ನು 11.96 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಅಭಿವೃದ್ಧಿಯನ್ನು ಮಾಡುವುದಕ್ಕೆ ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಯಜಮಾಡಿದ್ದು 95 ಲಕ್ಷ ರಾಪಾಯಿ ಇತ್ತು. ಕೋಡಿ ಬೇಂದ್ರೆದ್ದು ಎಸ್ಟಿಮೇಟೆಡ್ ಕಾಸ್ಟ್ 55.50 ಕೋಟಿ ರೂ. ಈಗ ಅದು ರಿವೈಸ್ಡ್ ಕಾಸ್ಟ್ 122 ಲಕ್ಷ

ರೂಪಾಯಿಗಳು. ಹಾಗೆಯೇ ಅಲ್ಲಿ ಕೋಡಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಭಟ್ಕಳದ್ದು 89.53 ಲಕ್ಷದ್ದು, ಬೆಳ್ಳಕೆರೆದು 67.40, ಮಂಗಳೂರಿನ ಎರಡನೇ ಹಂತದ ಕಾರ್ಯಕ್ರಮ 75 ಲಕ್ಷದ್ದು ಮಂಜೂರು ಆಗಿದೆ. ಹಾಗೆಯೇ ಕಾರವಾರದ ಎರಡನೇ ಹಂತ 129.78 ಲಕ್ಷ ಹಾಗೆಯೇ ಗಂಗೊಳ್ಳಿಯ ಸರ್ವಋತು ಬಂದಿರಿಗೋಸ್ಕರ ನಾವು ಸರ್ವೆಯನ್ನು ಮಾಡಿಸಿ ಆಗಿದೆ, ಆ ಸರ್ವೆ ರಿಪೋರ್ಟ್‌ನ್ನು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಕಳುಹಿಸಿ ಆಗಿದೆ. ಹಾಗೆಯೇ ಮಹಿಳಾ ಮೀನುಗಾರರ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಮಹಿಳಾ ಮೀನುಗಾರರ ವ್ಯಾಪಾರಕ್ಕೋಸ್ಕರ ಅವರಿಗೆ ಸಹಕಾರ ಸಂಘವನ್ನು ಮಾಡಿ, ಆ ಸಂಘದ ಸದಸ್ಯತ್ವಕ್ಕೆ ನೊಂದಣಿ ಹಣವನ್ನು ಸರ್ಕಾರದಿಂದ ಕೊಟ್ಟು, ಮತ್ತು ಅವರಿಗೆ 25 ಸಾವಿರ ರೂಪಾಯಿ ಹಣವನ್ನು ಕೊಡುತ್ತಿದ್ದೇವೆ. ಅದರಲ್ಲಿ ಅವರು ಸಾಲವನ್ನು ಪಡೆದು ವ್ಯಾಪಾರ ಮಾಡಿ, ಅದಕ್ಕೆ ಅವರಿಗೆ ನಾವು ಬಡ್ಡಿಯನ್ನು ಹಾಕುತ್ತಿಲ್ಲ.

ಶ್ರೀ ಸಿ.ಆರ್. ಸಗೀರ್. ಅಹಮದ್ : ಮೀನುಗಾರರಿಗೆ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಮನೆಗಳನ್ನು ನಿರ್ಮಿಸಿದ್ದೀರಿ ಅದರ ಬಗ್ಗೆ ಹೇಳಿದರೆ ಸಾಕು. ಬಾಕಿ ಮೀನಿನ ಎಲ್ಲಾ ವಿಚಾರವನ್ನು ನಾವು ತಿಳಿದುಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂತ್ರಿಗಳೇ, ಎಲ್ಲಾ ಮೀನುಗಳನ್ನು ತಿಮಿಂಗಿಲಗಳು ತಿಂದುಕೊಂಡಿವೆ, ನೀವು ಏಕೆ ಮಾತನಾಡುತ್ತೀರಿ? ಎಲ್ಲಾ ಮೀನುಗಳನ್ನು ನುಂಗಿಬಿಟ್ಟಿದೆ ಬೆಳಿಗ್ಗೆಯಿಂದ. ಆದ್ದರಿಂದ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಹೋಗಲಿ ಬಿಡಿ ಇಷ್ಟು ಹೊತ್ತಿಗಾದರೂ ಸತ್ಯ ಮಾತನಾಡಿದ್ದೀರಲ್ಲಾ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮನೆಗಳ ಬಗ್ಗೆ ಹೇಳುವುದಾದರೆ ನಾವು 5 ಸಾವಿರ ಮನೆಗಳನ್ನು .....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇನ್‌ಲ್ಯಾಂಡ್ ಫಿಷರೀಸ್‌ನಲ್ಲಿ ಹೆಚ್ಚು ಮನೆಗಳು ಇಲ್ಲ. ಕೋಲಾರ, ಬೆಳಗಾಂ ಈ ಕಡೆ ಹೋಗಿವೆ. ಬೇರೆ ಕಡೆ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂತ್ರಿಗಳೇ, ದಯವಿಟ್ಟು ನೀವೂ ನಮಗೂ ಒಂದು 500 ಮನೆಕೊಟ್ಟರೆ ಸಂತೋಷ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಇದುವರೆಗೂ 5 ಸಾವಿರದಿಂದ 6 ಸಾವಿರದವರೆಗೂ ಅರ್ಜಿಗಳು ಬಂದಿವೆ. ಈಗ ಪೆಂಡಿಂಗ್ ಇರುವಂತಾದ್ದು 5 ಸಾವಿರ ಅರ್ಜಿಗಳು. ಅದರ ಬಗ್ಗೆ ನಾವು ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದು ಪ್ಲಾನಿಂಗ್ ಮತ್ತು ಫೈನಾನ್ಸ್‌ನವರು ಕ್ಲಿಯರ್ ಮಾಡಿದ್ದಾರೆ. ಸಚಿವ ಸಂಪುಟದ ಮುಂದೆ ಬರುವುದಕ್ಕಿಂತ ಮುಂಚೆ ಅದರ ಮಧ್ಯೆದಲ್ಲಿ ಇನ್ನೊಂದು ತಕರಾರು ಬಂತು. ಹುಡ್ಕೋದಿಂದ ನೆರವನ್ನು ಪಡೆಯುತ್ತಿದ್ದೇವೆ. ಅದ್ದರಿಂದ ಒಂದು ಒಪ್ಪಿಗೆ ಪತ್ರವನ್ನು ತೆಗೆದುಕೊಳ್ಳಬೇಕು ಎಂದು. ಆ ಒಪ್ಪಿಗೆ ಪತ್ರವನ್ನು ತೆಗೆದುಕೊಂಡು ಆಗಿದೆ.

ಅಧ್ಯಕ್ಷರು : ಬಹಳ ಅನ್‌ಫೇರ್ ಆಟಿಟ್ಯೂಡ್ ಇವರದ್ದು. ಸೆಂಟ್ರಲ್ ಗೌರ್ನಮೆಂಟ್ ದುಡ್ಡು ರಿಲೀಸ್ ಮಾಡಿ ಸುಮಾರು ದಿವಸ ಆಗಿ ಹೋಯಿತು. ಇವರು ತಕರಾರು ಮಾಡಿಕೊಂಡು ಅವರೆಲ್ಲಾ ಮನೆಗಳನ್ನು ಪೂರ್ಣ ಮಾಡಿದ್ದಾರೆ. ಅವರಿಗೆ ಹಣ ಬಾರದೇ ಬಹಳ ಪಜೀತಿ ಆಗಿದೆ.

ಶ್ರೀ ಜಯಪ್ರಕಾಶ್ ಹೆಗಡೆ : ಹುಡ್ಕೋದವರು ಒಪ್ಪಿಗೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ನಿಮ್ಮ ಮೇಲೆ ವಿಶ್ವಾಸ ಇದೆ. ನೀವು ಮಾಡುತ್ತೀರಿ. ಇನ್ನೇನು ಬೇಡಿಕೆಗೆ ಮಂಜೂರಾತಿ ತಾನೇ ಕೇಳಿಬಿಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ತಮ್ಮ ಶಿಫಾರಸ್ಸಿನಿಂದ ಚಿಕ್ಕಮಂಗಳೂರಿಗೆ ಒಂದು ನೂರು ಮನೆ ಕೊಡುವಂತೆ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಸಭೆಯಲ್ಲಿ ಮಾತನಾಡುವಾಗ ಒಂದು ವಿಷಯವನ್ನು ಹೇಳಿದರು, ಕೋಸ್ಟಲ್ ಪೆಟ್ರೋಲಿಂಗ್ ಮಾಡುತ್ತೇವೆ ಎಂದು. ನಾವು ಫಿಷರೀಸ್ ಡಿಪಾರ್ಟ್‌ಮೆಂಟ್‌ನಿಂದ ಎರಡು ಪೆಟ್ರೋಲಿಂಗ್ ಬೋಟ್ಸನ್ನು ಖರೀದಿ ಮಾಡುತ್ತಿದ್ದೇವೆ. ಮ್ಯಾನ್ಡ್ ಬೈ ಪೋಲೀಸ್. ಡೆಪ್ಯುಟೇಷನ್‌ನಲ್ಲಿ ತೆಗೆದುಕೊಂಡು ಒಂದನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಇರುವುದು ಎಂದು ತೀರ್ಮಾನವನ್ನು ಮಾಡಿದ್ದೇವೆ. ನಾನು ಪ್ರಧಾನ ಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಮತ್ತು ಹೋಮ್ ಡಿಪಾರ್ಟ್‌ಮೆಂಟ್‌ನಲ್ಲಿ ಸಹ ಚರ್ಚೆಯನ್ನು ಮಾಡಿ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. It is a part of implementation of Marine Regulation Act. ಅದನ್ನು ಮಾಡುತ್ತಿದ್ದೇವೆ. ಇನ್ನು ಕೊನೆಗೆ ನನಗೆ ಮೂರು ವರ್ಷಗಳ ನಂತರ ಒಂದು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ಈ ಒಂದು ಬೇಡಿಕೆಗಳನ್ನು ಮಂಜೂರು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ,

"31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1,2,3 ಮತ್ತು 4 ಹಾಗೂ 8 ಮತ್ತು 46 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರ್ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಿಗಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರ್ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರ್ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಿದೆ.)

ಅಭಿಯಾಚನೆ ಕ್ರಮಾಂಕ 1 - ವ್ಯವಸಾಯ

"ರಾಜ್ಯ ಪಾಲರ ಶಿಫಾರಸ್ಸಿನ ಮೇರೆಗೆ 31-3-1999 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವ್ಯವಸಾಯಕ್ಕೆ " ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 68,62,95,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,01,02,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ 2 - ತೋಟಗಾರಿಕೆ

"ರಾಜ್ಯ ಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ತೋಟಗಾರಿಕೆ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 21,61,42,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 27,50,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 3 - ಪಶುಸಂಗೋಪನೆ.

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶುಸಂಗೋಪನೆ" ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 29,36,59,000 ರೂ. ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರ್ಮಾಡುವುದು.

ಅಭಿಯಾಚನೆ ಕ್ರಮಾಂಕ 4 - ಮೀನುಗಾರಿಕೆ

"ರಾಜ್ಯ ಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಮೀನುಗಾರಿಕೆ' ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5,84,92,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,14,25,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರ್ಮಾಡುವುದು.

ಅಭಿಯಾಚನೆ ಕ್ರಮಾಂಕ 8 - ರೇಷ್ಮೆ ವ್ಯವಸಾಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರೇಷ್ಮೆ ವ್ಯವಸಾಯ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು

ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 32,19,10,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 46 - ರೇವು ಮತ್ತು ಜಲಸಾರಿಗೆ ಸೇವೆಗಳು

"ರಾಜ್ಯ ಪಾಲರ ಶಿಫಾರಸ್ಸಿನ ಮೇರೆಗೆ 31-3-1999 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 59,72,99,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 39,70,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಧ್ಯಕ್ಷರು : ಈಗ ಸದನವನ್ನು ಮುಂದೂಡುತ್ತಿದ್ದೇನೆ ಮತ್ತೆ ಸದನವು ನಾಳೆ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 9 ಗಂಟೆ 45 ನಿಮಿಷಕ್ಕೆ ಮಂದೂಡಲ್ಪಟ್ಟು ಪುನಃ ದಿನಾಂಕ : 14ನೇ ಮೇ ಮಾಹೆ 1999ರ ಗುರುವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)